ಸ॥ 1903—1904ನೆ ಇಸವಿ ಅರ್ಜೀ ನಂಬರ್ 384.

ಮೃತಪಟ್ಟ ನಂಜೈಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಕಡೂರು ಡಿಸ್ಟ್ರಿಕ್ಟು ಕಡೂರು ತಾಲ್ಲೂಕು ಸಖ್ಖರಾಯಪಟ್ಟಣದಲ್ಲಿರುವ ಮೇಗಲಮನೆ ರಂಗಂಣಾ, ಮೃತಪಟ್ಟ ನಂಜೈಯ್ಯನವರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಕಡೂರು ತಾಲ್ಲೂಕು ಸಖ್ಖರಾಯಪಟ್ಟಣದಲ್ಲಿ ವಾಸಸ್ಥರಾಗಿ ಮೃತಪಟ್ಟ ನಂಜೈಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ॥ 1901ನೆ ಇಸವಿ 7ನೆ ರೆಗ್ಯುಲೇಷ್ನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಂಗಂಣನವರ ಅರ್ಜಿಯನ್ನು ಸ॥ 1904ನೆ ಇಸವಿ ಮಾರ್ಚಿ ತಿಂಗಳು ತಾರೀಖು 24ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜೈಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಷ್ಟರೂ ಈ ಕೋರ್ಟಿನೆಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ॥ 1904ನೆ ಇಸವಿ ಜನವರಿ ತಿಂಗಳು 22ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಟ್ಟಾಗಿಧೆ.

ಟಿ. ಪರಮಶಿವ ಅಯ್ಯರ್,
ಸಬ್ ಜಡ್ಜ್.

ಹಾಸನ ಡಿವಿಜ್.

ಪ್ರಶಿದ್ಧ ಪತ್ರಿಕೆ.

ತಾರೀಖು 9ನೆ ಜನವರಿ 1904ನೆ ಇಸವಿ.

I. ಹಾಸನ ತಾಲ್ಲೂಕು ರಿಜಸ್ಟರ್ 669ನೆ ನಂಬರು ಅಂಬುಗದ ತಲಾವ್ ಕಾಂಗಾರಿ ಉದ್ದಿಶ್ಯ 1904ನೆ ಇಸವಿ ಫೆಬ್ರವರಿ ಮಾಹೆ 15ನೆ ತಾರೀಖು ವರಿಗೂ ದರಖಾಸ್ತುಗಳು ಹಾಸನ ಡಿವೀಜ್ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರಿಂದ ತೆಗದುಕೊಳ್ಳಲ್ಪಡುತ್ತವೆ. ಈ ಕೆಳಗೆ ಕಂಡ ಅಂದಾಜಿನಲ್ಲಿನ ಐಟಂಗಳ ಮೊತ್ತವನ್ನ ಕಾಣಿಸಲ್ ಪಟ್ಟಿರುತ್ತದೆ. ಇದು ನಿಷ್ಕರ್ಷೆಯಾದದ್ದಾಗಿರುವದಿಲ್ಲಾ. ಡಿಟೋ ಕಾಂಗಾರಿಯು 1906ನೆ ಇಸವಿ ಮಾರ್ಚಿ ತಿಂಗಳು ಅಖೈರೊಳಗಾಗಿ ಪೂರೈಸತಕ್ಕದ್ದು.

II. ಪ್ಲಾ ಮತ್ತು ತಪಶೀಲು ಅಂದಾಜು ಮತ್ತು ಪರತ್ತುಗಳು ವಗೈರೆ ಹಾಸನ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರ ವರ ಆಫೀಸಿನಲ್ಲಿ ಕಛೇರಿಯ ದಿವಸಗಳ ಪ್ರಾತಃಕಾಲ 11 ಘಂಟೆ ಲಾಗಾಯಿತು ಸಾಯಿಂಕಾಲ 5 ಘಂಟೆ ವರಿಗೆ ನೋಡಲು ಅವಕಾಶ ಕೊಡಲ್ಪಡುತ್ತೆ.

III. ದರಖಾಸ್ತುಗಳನ್ನು ಆಚ್ಚು ಹಾಕಿದ ಫಾರಂನಲ್ಲೇ ಬರಿಯಬೇಕು. ಈ ಫಾರಂಗಳು ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫೀಸಿನಲ್ಲಿ ದೊರಿಯುತ್ತವೆ. ದರಖಾಸ್ತುಗಳಿಗೆ ಈ ಕೆಳಗೆ ಕಾಣಿಸಲ್ಪಟ್ಟಿರುವ ನಮೂನೆಯ ಪ್ರಕಾರ ಒಂದು ಸ್ಟೇಟ್‌ಮೆಂಟ್ ಲಗತ್ತು ಮಾಡಿರಬೇಕು. ಅದರಲ್ಲಿ ಕಂಟ್ರಾಕ್ಟುದಾರನು ಯಾವರೇಟ್ ಪ್ರಕಾರ ಪ್ರತಿ ಐಟಂಗಳ ಕೆಲಸವನ್ನು ಮಾಡಿಸಬಲ್ಲನೋ ಆ ರೇಟನ್ನು ಅಥವಾ ಆ ದರವನ್ನು ನಮೂದು ಮಾಡಬೇಕು.

ಫಾರಂ.

ಕೆಲಸದ ವಿವರ.	ಪ್ರತಿಯೊಂದು.	ಮೊತ್ತ.	ಕಂಟ್ರಾಕ್ಟುದಾರ ಕೆಲಸ ಮಾಡುವದಕ್ಕೆ ಕಪ್ಪುವ ದರ.			

IV. ಪ್ರತಿ ಒಂದು ದರಖಾಸ್ತಿನ ಸಂಗಡಲು 200 ರೂಪಾಯಿಗಳ ಕರೆನ್ಸಿ ನೋಟುಗಳಾಗಲಿ, ಗವರ್ನಮೆಂಟ್ ಪ್ರಾಂಸರಿ ಆಗಲಿ ಅಥವಾ ನಗದಾಗಲಿ ಡಿಪಾಜಿಟ್ ಹಣವನ್ನು ಠೇವಣಾತಿಯಾಗಿ ಹಾಜರ್ಮಾಡಬೇಕು. ಮತ್ತು ಲಕೋಟೆ ಮೇಲೆ "ಅಂಬುಗದ ತಲಾವ್ ಅಭಿವೃದ್ಧಿ ಕಾಂಗಾರಿ ಬಗ್ಯೆ ದರಖಾಸ್ತು" ಎಂದು ಬರಯಬೇಕು; ತಪ್ಪಿದಲ್ಲಿ ಅಂಥಾ ದರಖಾಸ್ತುಗಳನ್ನ ತಿರಸ್ಕರಿಸಲಾದೀತು.

V. ಯಾವ ದರಖಾಸ್ತನ್ನಾಗಲಿ ಮುಂಜೂರ್ಮಾಡತಕ್ಕದ್ದಕ್ಕೆ ಹಕ್ಕು ಚೀಫ್ ಇಂಜನಿಯರ್ ಸಾಹೇಬರವರು ಸ್ವತಂತ್ರರಾಗಿರುತ್ತಾರೆ. ಹಾಗೆ ಮುಂಜೂರ್ಮಾಡತಕ್ಕದ್ದರಲ್ಲಿ ಕೀಳ್ಪಟ್ಟ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಒಪ್ಪಿಕೊಳ್ಳಬೇಕೆಂಬ ನಿರ್ಬಂಧವಿರುವದಿಲ್ಲ ಅಲ್ಲದೆ ತಿರಸ್ಕರಿಸಿದ ದರಖಾಸ್ತುಗಳಿಗೆ ಕಾರಣಗಳನ್ನು ಕೊಡುವದಿಲ್ಲಾ.

VI. ಯಾವ ದರಖಾಸ್ತನ್ನೇ ಆಗಲಿ ಮುಂಜೂರ್ಮಾಡಿದ (8) ಎಂಟು ದಿನಗಳ ವಳಗಾಗಿ ಮುಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಕಂಟ್ರಾಕ್ಟು ಬಾಂಡ್ ಎಂಬ ಕರಾರು ಪತ್ರವನ್ನ ಬರದುಕೊಡಬೇಕು. ತಪ್ಪಿದಲ್ಲಿ ಅವನ ದರಖಾಸ್ತು ರದ್ದು ಮಾಡಲ್ಪಟ್ಟು ಠೇವಣಾತಿ ಹಣವನ್ನ ಸರ್ಕಾರಕ್ಕೆ ದಂಡವಾಗಿ ಜೇರಿಸಿಕೊಳ್ಳಲ್ಪಡುತ್ತೆ.

VII. ಮಂಜೂರಾದ ದರಖಾಸ್ತುದಾರನ ಹೆಸರು ಎಗ್ಸಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫೀಸ್ ಮುಂಭಾಗದಲ್ಲಿ ನೋಟೀಸ್ ಬೋರ್ಡ್‌ಮೇಲೆ ಬರೆದು ಟಿಕಟ್ಟುಯಿಸಲ್ಪಡುತ್ತೆ. ಅಂಗೀಕರಿಸಿದ ಅಥವಾ ತಿರಸ್ಕರಿಸಿದ ದರಖಾಸ್ತುದಾರುಗಳ ವಿಷಯದಲ್ಲಿ ಯಾವದೊಂದು ಜವಾಬ್ದಿಹೊರಿಯಲಾರದು.

VIII. ಯಾವದಾದರೂ ದರಖಾಸ್ತು ಮಂಜೂರಾದಸಂತರ ತಿರಸ್ಕರಿಸಲ್ಪಟ್ಟ ದರಖಾಸ್ತುದಾರರ ಹಣವನ್ನ ಅವರವರಿಗೆ ವಾಪಸ್ಮಾಡಲ್ಪಡುತ್ತೆ.

ತಾರೀಖು 9ನೆ ಜನವರಿ 1904.

ಹೊಸನ ತಾಲೂಕು ರಿಜಿಸ್ಟರ್ 669ನೆ ನಂಬರ್ ಅಂಬುಗದ ತಲಮನೆ ಅಭಿವೃದ್ಧಿ ಕಾಂಗಾರಿಯ ಅಂದಾಜಾ ಗೋಷ್ವಾರ್.

ಕೆಲಸದ ವಿವರ.	ಪ್ರತಿಯೊಂದಕ್ಕೆ.	ಮೊತ್ತ.
ಏರಿ.		
ಏರಿಗೆ ಮಟ್ಟು ಹಾಕುವದು—ಪಿಕ್ಕಿಂಗ್ ಮಾಡಿ, ನೀರು ಹಾಕಿ ವಗ್ಗೆರೆ, ಫಾನೆಲೆ ಕೇರಿ ...	ಸಲೆ ಗಜ	15,915
ಡಿಟೋ C.S. 7ರ ಲಗಾಯಿತು 12ರ ವರಿಗೆ ಮೇಲ್ಕಂಡಂತೆ ...	ಡಿಟೋ	6,843
ಹೆಪ್ಪುಗಟ್ಟುವದು ..	ಚದರ ಗಜ	30,730
ಗ್ರೇಡು ಕಲ್ಲುಗಳು, ತಳಪಡಿ ಸಮೇತ	ನಂ.	77
ವಿಸವಿಸ್ ಕಲ್ಲುಗಳು	ಡಿಟೋ	77
ಸಂವತ್ಸರ ಮತ್ತು ರಿಜಿಸ್ಟರ್ ನಂಬರ್ ಕಲ್ಲು ..	ಡಿಟೋ	1
ಬೆಂಚು ಮಾರ್ಕ್ ಕಲ್ಲುಗಳು	ಡಿಟೋ	2
ಗೇಜು ಕಲ್ಲುಗಳು	ಡಿಟೋ	3
ಹೊಸ ಕಾಡು ಕಲ್ಲುಕೆಲಸ ...	ಸಲೆ ಗಜ	1,932
ಹಳೇ ಕಾಡು ಕಲ್ಲು ಕೆಲಸ, ಹೊಸ ಜಲ್ಲಿ ಸಪ ...	ಡಿಟೋ	561
ಕಲ್ಲು ಕಟ್ಟುಸಿ ಹಿಂಭಾಗಕ್ಕೆ ಗ್ರಾವಲ್‌ನಿಂದ ಭದ್ರಪಡಿಸುವದು ...	ಡಿಟೋ	1,306
ಜಂಗಲೆ ಕತರಾಯಿಸುವದು	ಒಟ್ಟು ಮೊಬಲಗು	
ಏರಿಯ ಜಮ್ಲಾ ..		
ತೂಬುಗಳು.		
ನಂ. 2ನೆ ಮತ್ತು 3ನೆ ತೂಬುಗಳಿಗೆ ಹಿಂಗುಂಡಿ-ಮುಂಗುಂಡಿಗಳನ್ನ ಕಟ್ಟಿ, ನಂ. 4ನೆ ತೂಬನ್ನ ರಿಪೇರಿ ಮಾಡುವದು.	ಒಟ್ಟು ಮೊಬಲಗು	
ಎಡಗಡೆ ಕೋಡಿ, ಬಡಾವಣೆ 240 ಅಡಿ ಲಾಂಬಿ.		
ಮಟ್ಟು ಕೆಲಸ—ಖೋದಿಯಿಂದ ಏರಿ ಭರ್ತಿ	ಸಲೆ ಗಜ	96
ಡಿಟೋ ಡಿಟೋ ಕಲ್ಲು ಭೂಮಿಯಲ್ಲಿ	ಡಿಟೋ	1,190
ಸುರಂಗದ ಕೆಲಸ .. .	ಡಿಟೋ	50
ಸುಟ್ಟು ಇಟ್ಟಿಗೆ ಮತ್ತು ಸುರ್ಕಿ ಗಾರೆ ಕೆಲಸ	ಸಲೆ ಅಡಿ	1,163
ಸುರ್ಕಿ ಗಾರೆಯ ಗಿಲಾವು	ಚದರ	9·75
ಸುರ್ಕಿ ಗಾರೆಯಿಂದ ಕಟ್ಟುತಕ್ಕ ಹೊಸ ಕಾಡು ಕಲ್ಲುಕೆಲಸ ..	ಸಲೆ ಅಡಿ	2,204
ಹಳೇ ಕಾಡು ಕಲ್ಲು ಕೆಲಸ	ಸಲೆ ಗಜ	286
ಹೊಸ ಕಾಡು ಕಲ್ಲು ಕೆಲಸ	ಡಿಟೋ	155
ಮಟ್ಟುಕೆಲಸ, ನಾಲಾ ಖೋದಿ	ಡಿಟೋ	7,182
ತಳಪಡಿ ಕಲ್ಲುಗಳು, ಸಂತಾಷ್ ಮಾಡಿದ್ದು	ಚದರ ಅಡಿ	5·3
ಹಾಲಿ ಇರತಕ್ಕ ಕೋಡೀಗೆ ಮಾಡತಕ್ಕ ಚಿಲ್ರೆ ಕಾಂಗಾರಿ ..	ಒಟ್ಟು ಮೊಬಲಗು	
ಎಡಗಡೆ ಕೋಡಿಯ ಜಮ್ಲಾ ..		
ಬಲಗಡೆ ಕೋಡಿ, 30 ಅಡಿ ಲಾಂಬಿ.		
ನಾಲಾ ಖೋದಿ	ಒಟ್ಟು ಮೊಬಲಗು	

ಸಿ. ಎ. ಮಹದೇವ ಶಾಸ್ತ್ರಿ,
ಎಗ್ಸಿಕ್ಯೂಟಿವ್ ಇಂಜಿನಿಯರ್.